ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ (932)
2. ಮಾನ್ಯ ಸದಸ್ಯರ ಹೆಸರು — ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ — 28/09/2020
4. ಉತ್ತರಿಸುವವರು — ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕೊರೋನಾದಿಂದ ಲಾಕ್‌ಡೌನ್ ಘೋಷಣೆಯಾದ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಕಾರ್ಮಿಕ ವರ್ಗದವರಿಗೆ ನೆರವಾಗಲು ಮೂಲ ಸಲಕರಣೆಗಳನ್ನೊಳಗೊಂಡ ಕಿಟ್‌ಗಳನ್ನು ಪೂರೈಸುವ ಯೋಜನೆಯನ್ನು ಜಾರಿಗೊಳಿಸಿ, ಸದರಿ ಯೋಜನೆಯನ್ವಯ ಹಾವೇರಿ, ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಕಿಟ್‌ಗಳನ್ನು ಪೂರೈಸಲಾಗಿದೆ;	ರಾಜ್ಯದಲ್ಲಿ ಕೊರೋನಾದಿಂದ ಲಾಕ್‌ಡೌನ್ ಘೋಷಣೆಯಾದ ಸಂದರ್ಭದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಮೂಲ ಸಲಕರಣೆಗಳನ್ನೊಳಗೊಂಡ ಕಿಟ್‌ಗಳನ್ನು ಪೂರೈಸುವ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ.
ಆ)	ಸದರಿ ಕಿಟ್‌ಗಳನ್ನು ನೀಡುವಾಗ ನಿಗದಿಪಡಿಸಿದ ಮಾನದಂಡಗಳು ಹಾಗೂ ಅರ್ಹತೆಗಳೇನು;	ಅನ್ವಯಿಸುವುದಿಲ್ಲ.
ಇ)	ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ, ಖಾಸಗಿ ವ್ಯಕ್ತಿಗಳ ಮನೆಯಲ್ಲಿ ಸರ್ಕಾರದ ಯೋಜನೆಯ ಫುಡ್‌ಕಿಟ್‌ಗಳನ್ನು ಸಂಗ್ರಹಿಸಿಟ್ಟು, ಕಾರ್ಮಿಕರಲ್ಲದವರಿಗೆ ಕಿಟ್ ವಿತರಿಸಿರುವುದರ ಮೂಲಕ ಸರ್ಕಾರ ಯೋಜನೆಯ ದುರುಪಯೋಗ ಮಾಡಿಕೊಳ್ಳುತ್ತಿದ್ದ ವಿಷಯದ ಕುರಿತು ದೂರನ್ನು ನೀಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ, ಅಸಂವಿಧಾನಿಕವಾಗಿ ಕಿಟ್‌ಗಳ ಪೂರೈಕೆ ಮಾಡಿದ ವ್ಯಕ್ತಿಗಳು ಹಾಗೂ ಸ್ಥಳದಲ್ಲಿ ಹಾಜರಿದ್ದು, ಅಕ್ರಮವನ್ನು ತಡೆಯದೆ ನಿರ್ಲಕ್ಷತೆಯನ್ನು ತೋರಿದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ;	ಹಾನಗಲ್ ತಾಲ್ಲೂಕಿನ ಸಾರ್ವಜನಿಕರು ನೀಡಿರುವ ದೂರಿನನ್ವಯ ಅಪರ ಜಿಲ್ಲಾಧಿಕಾರಿಗಳು ಹಾವೇರಿ ಜಿಲ್ಲೆ ಇವರು ದಿನಾಂಕ: 25-05-2020 ರಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಹಾವೇರಿ ಇವರಿಗೆ ದೂರಿನ ಕುರಿತು ಮಾಹಿತಿಯೊಂದಿಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದರು. ಅದರಂತೆ ಕಾರ್ಮಿಕ ಅಧಿಕಾರಿ ಹಾವೇರಿ ಇವರು ದಿನಾಂಕ 21-10-2020 ರಂದು ದೂರಿನಲ್ಲಿನ ಅಂಶಗಳ ಕುರಿತಾದ ವರದಿಯನ್ನು ದಿನಾಂಕ: 29-05-2020 ರಂದು ಜಿಲ್ಲಾಧಿಕಾರಿಗಳು ಹಾವೇರಿ ಜಿಲ್ಲೆ ಇವರಿಗೆ ಸಲ್ಲಿಸಿರುತ್ತಾರೆ (ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ).
ಉ)	ಅಕ್ರಮವನ್ನು ತಡೆಯದೆ ನಿರ್ಲಕ್ಷತೆಯನ್ನು ತೋರಿದ ಅಧಿಕಾರಿಗಳ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದೆ, ಎಫ್.ಐ.ಆರ್ ದಾಖಲಿಸದೆ, ವಿಳಂಬ ಮಾಡುತ್ತಿರಲು ಕಾರಣಗಳೇನು;	

ಕಾಇ 327 ಎಲ್ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

OFFICE OF THE DEPUTY COMMISSIONER HAVERI – 581110
ದೂರವಾಣಿ : 08375-249044, 249024
Telephone : (Fax) 08375-249088/19
Email: deo.haveri@gmail.com

ಸಂ : ಎಂಎಜಿ :ಕೋವಿಡ್-19 :ವಹಿ : 82 :2020-21 ದಿನಾಂಕ :25-05-2020

ಗೆ,
ಜಿಲ್ಲಾ ಕಾರ್ಮಿಕ ಅಧಿಕಾರಿಗಳು
ಹಾವೇರಿ

ವಿಷಯ :- ಕೋವಿಡ್-19ಗೆ ಸಂಬಂಧಿಸಿದಂತೆ ಹಾನಗಲ್ಲ ತಾಲ್ಲೂಕಿಗೆ ಕಾರ್ಮಿಕ ಇಲಾಖೆಯಿಂದ ಪೂರೈಸಲಾದ ಅಗತ್ಯ ವಸ್ತುಗಳ ಕಿಟ್ ಗಳನ್ನು ಅರ್ಹ ನೊಂದಾಯಿತರಿಗೆ ವಿತರಿಸದ ದುರುಪಯೋಗ ಮಾಡಿಕೊಂಡ ಬಗ್ಗೆ.
ಉಲ್ಲೇಖ :- ಹಾನಗಲ್ಲ ತಾಲ್ಲೂಕಿನ ಸಾರ್ವಜನಿಕರ ಮನವಿ ದಿನಾಂಕ :23-05-2020

** ** **

ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ನಿಟ್ಟಿನಲ್ಲಿ ಆದ ಲಾಕ್ ಡೌನ ಸಂದರ್ಭದಲ್ಲಿ ಸಂಕಷ್ಟಕ್ಕೀಡಾದ ನೋಂದಾಯಿತ ಕಾರ್ಮಿಕರಿಗೆ ಸರ್ಕಾರದ ಕಾರ್ಮಿಕ ಇಲಾಖೆಯಿಂದ ಅಗತ್ಯ ವಸ್ತುಗಳನ್ನು ಒಳಗೊಂಡ ಕಿಟ್ ವಿತರಿಸುವ ಕಾರ್ಯಕ್ರಮ ರೂಪಿಸಿದ್ದು, ಸದರಿ ಕಿಟ್ ಗಳನ್ನು ಕಾರ್ಮಿಕ ಇಲಾಖೆಯ ಮೂಲಕವೇ ಹಂಚಿಕೆ ಮಾಡಬೇಕೆಂದು ನಿಯಮವಿದ್ದು, ಹೀಗಿರುವಾಗ ಹಾನಗಲ್ಲ ಪುರಸಭೆ ಮಾಜಿ ಅಧ್ಯಕ್ಷರಾದ ಶ್ರೀ ಕಲ್ಯಾಣಕುಮಾರ ಶೆಟ್ಟರ ಎಂಬುವರಿಗೆ ಸೇರಿದ ಕಟ್ಟದಲ್ಲಿ ನೋಂದಾಯಿತ ಕಾರ್ಮಿಕರಿಗೆ ಹಂಚಿಕೆ ಮಾಡಬೇಕಿದ್ದ ಇಲಾಖೆಯ ಲೇಬಲ್ ಅಂಟಿಸಿರುವ ಕಿಟ್ ಗಳನ್ನು ಅಕ್ರಮವಾಗಿ ಸಂಗ್ರಹಿಸಿ, ಅಪಸಾತನಲ್ಲಿ ಮಾರಾಟ ಮಾಡಲಾಗುತ್ತಿತ್ತು, ಈ ವಿಷಯ ತಿಳಿದು ಸಾರ್ವಜನಿಕರು ರಾತ್ರಿ ಸ್ಥಳಕ್ಕೆ ಮುತ್ತಿಗೆ ಹಾಕಿದ್ದು ಇರುತ್ತದೆ ಹಾಗೂ ತಹಶೀಲ್ದಾರ ಮತ್ತು ಪಿ.ಎಸ್.ಐ ರವರ ಸಮ್ಮುಖದಲ್ಲೇ ಕಿಟ್ ಗಳು ಲೂಟಿಯಾಗಿದ್ದು ಇರುತ್ತದೆ. ಇದನ್ನು ಕಣ್ಣಾರೆ ಕಂಡರು ಅದನ್ನು ತಡೆಯಲು ಯಾವುದೇ ಪ್ರಯತ್ನವನ್ನು ಮಾಡಲಿಲ್ಲ ಇದರಿಂದ ಲೂಟಿಯಲ್ಲಿ ಅಧಿಕಾರಿಗಳು ಶಾಮಿಲಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಅಂತಾ ಉಲ್ಲೇಖಿತ ಮನವಿಯಲ್ಲಿ ತಿಳಿಸಿ ಈ ಕುರಿತು ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಕೊಳ್ಳಬೇಕೆಂದು ಆಗ್ರಹಿಸಿರುತ್ತಾರೆ.(ಮನವಿ ಪ್ರತಿ ಲಗತ್ತಿಸಿದೆ)

ಕಾರಣ ಉಲ್ಲೇಖಿತ ಮನವಿಯಲ್ಲಿ ತಿಳಿಸಿರುವ ವಿಷಯಗಳಿಗೆ ಸಂಬಧಿಸಿದಂತೆ ಕಾರ್ಮಿಕ ಇಲಾಖೆಯಿಂದ ಹಾವೇರಿ ಜಿಲ್ಲೆಗೆ ಹಂಚಿಕೆಯಾದ ಒಟ್ಟು ಕಿಟ್ ಗಳ ವಿವರ, ಇದರಲ್ಲಿ ಹಾನಗಲ್ಲ ತಾಲ್ಲೂಕಿಗೆ ಹಂಚಿಕೆ ಮಾಡಿದ ಕಿಟ್ ಗಳ ವಿವರ, ಕಾರ್ಮಿಕ ಇಲಾಖೆಯಿಂದ ಹಂಚಿಕೆಯಾದ ಈ ಕಿಟ್ ಗಳನ್ನು ವಿತರಿಸಲು ಅನುಸರಿಸಬೇಕಾದ ಮಾನದಂಡಗಳ ವಿವರಣೆ, ಕಿಟ್ ಗಳನ್ನು ವಿತರಣೆ ಮಾಡಲು ನಿಯೋಜಿಸಿದ ಅಧಿಕಾರಿಗಳ/ ಸಿಬ್ಬಂದಿಗಳ ವಿವರ, ಕಿಟ್ ನಲ್ಲಿರುವ ಆಹಾರ ಹಾಗೂ ಇತರೆ ಸಾಮಗ್ರಿಗಳ ವಿವರ, ಇಲ್ಲಿಯವರೆಗೆ ಒಟ್ಟಾರೆಯಾಗಿ ಹಂಚಿಕೆ ಮಾಡಿದ ಕಿಟ್ ಗಳ ವಿವರ. ಈ ಎಲ್ಲ ಮಾಹಿತಿಯನ್ನು ದಿನಾಂಕ :26-05-2020 ರಂದು ಸಂಜೆ 04-00 ಗಂಟೆಯೊಳಗಾಗಿ ಸಲ್ಲಿಸಲು ಸೂಚಿಸಿದೆ.

(signature)
ಅಪರ ಜಿಲ್ಲಾಧಿಕಾರಿಗಳು
ಹಾವೇರಿ ಜಿಲ್ಲೆ, ಹಾವೇರಿ
25/05/2020

ಕರ್ನಾಟಕ ಸರ್ಕಾರ [illegible]

[illegible] 2020-21/13

[illegible]
[illegible]
ದಿನಾಂಕ: [illegible]-2020

[illegible],

[illegible]
[illegible]

[illegible],

[illegible] ಕೋವಿಡ್-19 [illegible]

[illegible]

[illegible]

[illegible]

....

[illegible] 09-05-2020 [illegible] 6000 [illegible] 3000 [illegible] 4000 [illegible]

[illegible]

[illegible]

[illegible]

[illegible]

[illegible]